**<u>ದಿನಾಂಕಃ07.01.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಕೆ.ಕೆ., ವಕೀಲರಿಂದಃ-</u>**

ಹಾಲಿ ನಾನು ಅಬ್ಬೂರು ದೊಡ್ಡಿ ಗ್ರಾಮದಲ್ಲಿ ವಾಸ ಇದ್ದೇನೆ. ಅಬ್ಬೂರು ದೊಡ್ಡಿ ಗ್ರಾಮದಲ್ಲಿ ತಮಗೆ ಜಮೀನು ಇದೆಯಾ ಎಂದರೆ ಸಾಕ್ಷಿ 20 ಗುಂಟೆ ಜಮೀನು ಇದೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಎ ಐಟಂ ನಂಬರ್ 1ರ ಸ್ವತ್ತಿನಲ್ಲಿ ತಾವು 2013ರಿಂದ ಸ್ವಾಧೀನ ಇದ್ದೇನೆಂದು ಹೇಳಿದ್ದು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. ಐಟಂ ನಂಬರ್ 1ರ ಸ್ವತ್ತನ್ನು ಬೋಗ್ಯಕ್ಕೆ ಮಾಡಿಕೊಂಡಿದ್ದೆ ಎಂದು ಹೇಳಿದ್ದು ಬೋಗ್ಯ ಮಾಡಿಕೊಂಡ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಎನ್ನುತ್ತಾರೆ. ಬೋಗ್ಯ ಮಾಡಿಕೊಂಡು ವಾರ್ಷಿಕ 30 ಸಾವಿರ ಹಣವನ್ನು ವಾದಿ ಮತ್ತು ವಾದಿಯ ಸೊಸೆಗೆ ಕೊಡುತ್ತಿದ್ದೆ ಎಂದು ಹೇಳಿದ್ದು ಈ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಐಟಂ ನಂಬರ್ 1 ಸರ್ವೆ ನಂಬರ್.35 ವಿಸ್ತೀರ್ಣ 1 ಎಕರೆ 3 ಗುಂಟೆ ಆಸ್ತಿಯಲ್ಲಿ 25 ವರ್ಷಕ್ಕೂ ಹಳೆಯ ತೆಂಗಿನ ಮರಗಳು ಇವೆ ಎಂದರೆ ಸರಿ. ಸದರಿ ಐಟಂ ನಂಬರ್ 1ರ ಸ್ವತ್ತು ವ್ಯವಸಾಯಕ್ಕೆ ಯೋಗ್ಯ ಜಮೀನು ಎಂದರೆ ಸಾಕ್ಷಿ, ಮಳೆಗಾಲದಲ್ಲಿ ವ್ಯವಸಾಯ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್ 1ರ ಸ್ವತ್ತಿನಲ್ಲಿ ಹಿಪ್ಪನೇರಳೆ ಮತ್ತು ಬಾಳೆ ಬೆಳೆಗಳನ್ನು ಬೆಳೆದಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ತಾವು ರೇಷ್ಮೆ ಸಾಕಾಣಿಕೆ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ರೇಷ್ಮೆ ಬೆಳೆದು ರೇಷ್ಮೆ ಗೂಡನ್ನು ರೇಷ್ಮೆ ಇಲಾಖೆಗೆ ಮಾರಾಟ ಮಾಡಿದರೆ ನೇರ ಖಾತೆಗೆ ಹಣವನ್ನು ಜಮಾ ಮಾಡುತ್ತಾರೆ ಎಂದರೆ ಸರಿ. ಮಾರುಕಟ್ಟೆಯಿಂದ ಪಾಸ್ ಬುಕ್ ಸಹ ಕೊಡುತ್ತಾರೆ ಎಂದರೆ ನಾನು ಮಾಡಿಸಿಲ್ಲ ಎನ್ನುತ್ತಾರೆ. ತಾವು ದಾವಾ ಐಟಂ ನಂಬರ್ 1ರ ಸ್ವತ್ತಿನಲ್ಲಿ ರೇಷ್ಮೆ ಬೆಳೆ ಬೆಳೆದಿದ್ದರೆ ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಡಲು ಯಾವುದೇ ತೊಡಕು ಇಲ್ಲ ಎಂದರೆ ಸಾಕ್ಷಿ ರೇಷ್ಮೆ

ಸೊಪ್ಪನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರಸ್ತುತ ರೇಷ್ಮೆ ಬೆಳೆಯಾಗಲೀ ಬಾಳೆ ಬೆಳೆಯಾಗಲೀ ಇದೆಯಾ ಎಂದರೆ ಸಾಕ್ಷಿ ಈಗ ಇಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್ 1ರ ಸ್ವತ್ತಿನಲ್ಲಿ ನಾನು ಹೇಳಿರುವ ಹಾಗೆ ರೇಷ್ಮೆ ಬೆಳೆ, ಬಾಳೆ ಬೆಳೆ ಇಲ್ಲದಿದ್ದರೂ ಸದರಿ ಬೆಳೆಗಳು ಇವೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ ಭಾಗ್ಯಮ್ಮ ಅವರ ಹೆಸರಿಗೆ ಖಾತೆ ಇವೆ ಎಂದರೆ ಸರಿ. ವಾದಿ ಮತ್ತು ನನ್ನ ನಡುವೆ ಐಟಂ ನಂಬರ್ 1ರ ಸ್ವತ್ತಿನಲ್ಲಿ ಇರುವ ತೆಂಗಿನ ಕಾಯಿ ಕೀಳುವ ವಿಷಯವಾಗಿ ಸಾಕಷ್ಟು ಬಾರಿ ಜಗಳ ಆಗಿದೆ ಎಂದರೆ ಸರಿ. ದಾವಾ ಐಟಂ ನಂಬರ್ 1ರ ಸ್ವತ್ತಿಗೆ ಸಂಬಂಧ ವಾದಿಯು ನನಗೆ ಅಧಿಕೃತ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿದು, ವಾದಿ, ವಾದಿಯ ಸೊಸೆ ಮತ್ತು ವಾದಿಯ ಮಗ ಬಾಯಿ ಮಾತಲ್ಲಿ ಮಾತಾಡಿ ನನಗೆ ಬೋಗ್ಯಕ್ಕೆ ಕೊಟ್ಟಿದ್ದರು ಎನ್ನುತ್ತಾರೆ. ವಾದಿಯಾಗಲೀ, ವಾದಿಯ ಮಗ ಮತ್ತು ಸೊಸೆಯಾಗಲೀ ದಾವಾ ಐಟಂ ನಂಬರ್ 1ರ ಸ್ವತ್ತನ್ನು ನನಗೆ ಬೋಗ್ಯಕ್ಕೆ ಕೊಡದೇ ಇದ್ದರೂ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1ರ ಸ್ವತ್ತಲ್ಲಿ ನಾನು ಯಾವುದೇ ಸ್ವಾಧೀನಾನುಭೋಗದಲ್ಲಿ ಇಲ್ಲದೇ ಇದ್ದರೂ ವಾದಿಯ ಸೊಸೆಯ ಮಾತು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**
(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ.